

## ಚಿಕಿತ್ಸೆ ಏನು?

ಸಡಿಲವಾದ ಅಲುಗುವ ಹಲ್ಲುಗಳ ಚಿಕಿತ್ಸೆಗೆ ಕಾರಣ ತಿಳಿಯುವುದು ಅತ್ಯಂತ ಮುಖ್ಯ. ಸ್ಕೇಲಿಂಗ್ ಮತ್ತು ಕ್ಯುರೆಟಾಜ್ ಎನ್ನುವ ಸ್ವಚ್ಛತಾ ವಿಧಾನದ ಮೂಲಕ ಹಲ್ಲು ಪಾಚಿ, ಕಟ್ಟಿದ ಗಾರೆಯನ್ನು ತೆಗೆದರೆ ವಸಡಿನ ಆರೋಗ್ಯ ಸುಧಾರಿಸುತ್ತದೆ.ಇದು ದಂತಸುತ್ತುಪರೆರೋಗ ಮತ್ತು ವಸಡಿನ ಹಿಂಸರಿತ ತಡೆಯುವಲ್ಲಿ ಪರಿಣಾಮಕಾರಿ. ದೋಷಪೂರಿತ ಹಲ್ಲುಗಳ ಸಂಪರ್ಕ ಇದ್ದಾಗ ಅದನ್ನು ದಂತವೈದ್ಯರು ಫಿಲ್ಲಿಂಗ್, ಕ್ಯಾಪ್, ವಿಶೇಷ ಸಾಧನ, ವಕ್ರದಂತ ಚಿಕಿತ್ಸೆ ಹೀಗೆ ಅಗತ್ಯಕ್ಕೆ ತಕ್ಕಂತೆ ವಿಧಾನ ಬಳಸಿ ಸರಿಪಡಿಸುತ್ತಾರೆ. ಹಲ್ಲು ಕಡಿಯುವ ಅಭ್ಯಾಸ ಇರುವವರಲ್ಲಿ ಹಲ್ಲಿನ ಸಂಪರ್ಕ ತಪ್ಪಿಸಲು ವಿಶೇಷ ಸಾಧನ (ಬೈಟ್ ಗಾರ್ಡ್) ನೀಡಲಾಗುತ್ತದೆ.

ವಸಡಿನಲ್ಲಿರುವ ಗಡ್ಡೆ ಮತ್ತು ಬೊಕ್ಕೆಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಬಹುದು.ಪೆಟ್ಟು/ ಅಪಘಾತದಿಂದ ಹಲ್ಲು ಅಲುಗಾಡಿದರೆ ಅವುಗಳನ್ನು ಸ್ಲಿಂಟಿಂಗ್ (ಲೋಹದ ಪಟ್ಟಿ) ಹಾಕುವುದರಿಂದ ಬಿಗಿ ಮಾಡಬಹುದು.

ಹಲ್ಲಿಗೆ ಆಧಾರ ನೀಡುವ ಎಲುಬಿನಲ್ಲಿ ಸವೆತ ಕಂಡುಬಂದರೆ ಮೂಳೆ ಕಸಿ ಮಾಡಿ ಎಲುಬನ್ನು ಬಲಪಡಿಸಲು ಸಾಧ್ಯ. ಮಧುಮೇಹಿಗಳು ತಮ್ಮ ದಂತಾರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದರ ಜತೆ ನಿಯಮಿತವಾಗಿ ದಂತವೈದ್ಯರನ್ನು ಭೇಟಿ ಮಾಡಬೇಕು.

ಇವುಗಳು ಹಿಗ್ಗುವ/ ಮುರಿಯುವ ಸಾಧ್ಯತೆ ಹೆಚ್ಚು. ಪರಿಣಾಮವಾಗಿ ಹಲ್ಲು ಸಡಿಲವಾಗುತ್ತದೆ.

**ಹಲ್ಲು ಕಡಿಯುವ ಅಭ್ಯಾಸ:** ಸಾಮಾನ್ಯವಾಗಿ ರಾತ್ರಿ ಮಲಗಿದಾಗ ಹಲ್ಲು ಕಡಿಯುವ ಅಭ್ಯಾಸ ಅನೇಕರಲ್ಲಿರುತ್ತದೆ. ಇದರಿಂದ ಹಲ್ಲುಗಳ ಮೇಲೆ ಅನಗತ್ಯ ಶಕ್ತಿ ಪ್ರಯೋಗವಾಗಿ ಹಲ್ಲು ಅಲುಗುವ ಸಾಧ್ಯತೆ ಹೆಚ್ಚು.

**ಗರ್ಭಾವಧಿ:** ಮಹಿಳೆಯರಲ್ಲಿ ಗರ್ಭಿಣಿಯಾಗಿದ್ದಾಗ ಹಾರ್ಮೋನುಗಳ ಪ್ರಮಾಣದಲ್ಲಿ ಏರುಪೇರು ಸಹಜ.ಇದರಿಂದಾಗಿ ವಸಡಿನಲ್ಲಿ ಉರಿಯೂತ, ಕೆಂಪಾಗುವಿಕೆ, ರಕ್ತ ಒಸರುವುದು ಸಾಮಾನ್ಯ. ಈ ಸಂದರ್ಭದಲ್ಲಿ ಹಲ್ಲಿನ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನ ನೀಡದಿದ್ದಲ್ಲಿ ಅದು ದಂತಸುತ್ತು ಪರೆರೋಗಕ್ಕೆ ಕಾರಣವಾಗಿ ಹಲ್ಲು ಅಲುಗಾಡಬಹುದು.

**ಆಸ್ಟಿಯೊಪೊರೋಸಿಸ್ (ಅಸ್ಥಿರಂಧ್ರತೆ):** ಮೂಳೆಗಳು ದುರ್ಬಲ ಮತ್ತು ಪೊಳ್ಳಾಗುವ ಈ ಸಮಸ್ಯೆ ಋತುಬಂಧದ ನಂತರ ಮಹಿಳೆಯರಲ್ಲಿ ಅತಿ ಹೆಚ್ಚು. ದೇಹದಲ್ಲಿರುವ ಮೂಳೆಗಳ ಸಾಂದ್ರತೆ ಕಡಿಮೆಯಾದಂತೆ ಹಲ್ಲುಗಳನ್ನು ಹಿಡಿದಿಡುವ ವಸಡಿನ ಎಲುಬಿನಲ್ಲೂ ಸವೆತ ಇರಬಹುದು. ಹೀಗಾಗಿ ಹಲ್ಲು ಅಲುಗಾಡಬಹುದು.

**ದೋಷಪೂರಿತ ಕಚ್ಚುವಿಕೆ:** ಹಲ್ಲುಗಳ ಪ್ರಮುಖ ಕಾರ್ಯಗಳಲ್ಲಿ ಆಹಾರ ಅಗಿಯುವಿಕೆ ಒಂದಾಗಿದೆ. ಈ ಕೆಲಸಕ್ಕೆ ಹಲ್ಲುಗಳ ನಡುವೆ ಸರಿಯಾದ ರೀತಿಯಲ್ಲಿ ಸಂಪರ್ಕ ಇರಬೇಕು. ಈ ಸಂಪರ್ಕ ಸಾಧಿಸುವಾಗ ಅನಗತ್ಯ ರಭಸ ಇದ್ದಲ್ಲಿ ಅದು ಹಲ್ಲಿನ ಮೇಲೆ ಪರಿಣಾಮ ಬೀರಿ ಹಲ್ಲು ಸಡಿಲವಾಗುತ್ತದೆ.

### ವಸಡಿನಲ್ಲಿರುವ ಗಡ್ಡೆ ಬೊಕ್ಕೆಗಳು

ಕಾರಣ ಏನೇ ಇದ್ದರೂ ಮೊದಲು ದಂತವೈದ್ಯರು ಹಲ್ಲುಗಳ ಅಲುಗಾಡುವಿಕೆಯನ್ನು ಮೊದಲು ಪರೀಕ್ಷಿಸಿ ಮಾಪನ ಮಾಡುತ್ತಾರೆ.

ಗ್ರೇಡ್ 0: ಅಲುಗಾಡುವಿಕೆ ಇಲ್ಲದಿರುವುದು/ ಸಹಜ ಅಲುಗಾಡುವಿಕೆ

ಗ್ರೇಡ್ 1: ಒಂದು ಮಿ.ಮೀ ಅಡ್ಡಲಾಗಿ ಅಲುಗಾಟ

ಗ್ರೇಡ್ 2: ಒಂದು ಮಿ.ಮೀಗಿಂತ ಹೆಚ್ಚು ಅಡ್ಡಲಾಗಿ ಅಲುಗಾಟ

ಗ್ರೇಡ್ 3: ಒಂದು ಮಿ.ಮೀಗಿಂತ ಹೆಚ್ಚು ಅಡ್ಡ ಮತ್ತು ಲಂಬ ಅಲುಗಾಟ

ಹೀಗೆ ಮೊದಲು ವ್ಯಕ್ತಿಯ ಬಾಯಿಯನ್ನು ಪರಿಶೀಲಿಸಿ ನಂತರ ಅಗತ್ಯವೆನಿಸಿದಲ್ಲಿ ಹಲ್ಲಿನ ಸುತ್ತಲಿನ ಮೂಳೆಯ ಸಾಂದ್ರತೆ, ರಚನೆ ನೋಡಲು ಎಕ್ಸರೇ ತೆಗೆಯಬಹುದು. ಹಲ್ಲು ಅಲುಗಾಡುವಿಕೆ ಕಡಿಮೆ ಇದ್ದಾಗ ಅಂದರೆ ಆರಂಭದ ಹಂತದಲ್ಲಿ ಚಿಕಿತ್ಸೆ ಸುಲಭ ಮತ್ತು ಪರಿಣಾಮಕಾರಿ. ಅಡ್ಡ ಮತ್ತು ಲಂಬ ಎರಡೂ ಅಲುಗಾಟವಿದ್ದಾಗ ಕೆಲವೊಮ್ಮೆ ಚಿಕಿತ್ಸೆ ಫಲಕಾರಿಯಾದೇ ಇರಬಹುದು; ಹೀಗೆ ಅನಿವಾರ್ಯವಾದಾಗ ಇಂಥ ಹಲ್ಲನ್ನು ಕಿತ್ತು ಅಲ್ಲಿ ಕೃತಕ ದಂತ ಇಡುವ ಸಲಹೆಯನ್ನು ದಂತವೈದ್ಯರು ನೀಡುತ್ತಾರೆ.

### ಹಾಲುಹಲ್ಲಿನ ಆರೈಕೆ

- ಹಾಲು ಹಲ್ಲಿನ ಆರೋಗ್ಯ, ಕಾಳಜಿ ಮತ್ತು ಆರೋಗ್ಯದ ಬಗ್ಗೆ ಗಮನ ಕೊಡಬೇಕಾದ ಅಗತ್ಯ ಬಹಳ ಇದೆ.
- ಹಾಲು ಹಲ್ಲುಗಳು ಮಕ್ಕಳ ಮುಖದ ಆಕಾರ, ನಗು ಮತ್ತು ಆಹಾರ ಅಗಿಯುವ ಕ್ರಿಯೆಗೆ ಸಹಕಾರಿ.
- ಇವು, ಶಾಶ್ವತ ಹಲ್ಲುಗಳ ಮೂಡುವ ಪ್ರಕ್ರಿಯೆ ಹಾಗೂ ಜೋಡಣೆಗೆ ಸಹಕಾರಿ.
- ಆಹಾರ ಪಚನಕ್ರಿಯೆಯಲ್ಲಿ ತುಂಬಾ ಮುಖ್ಯ.

ಲೇಖಕಿ ಬೆಂಗಳೂರಿನಲ್ಲಿ ದಂತವೈದ್ಯೆ.
ಸಂಪರ್ಕ: 9845229542